## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 23-12-2022

### ಸಿ.ಇ.ಎನ್. ಕ್ರೆಂ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 19/2022 ಕಲಂ 420 ಐಪಿಸಿ ಮತ್ತು 66(ಡಿ) ಐ.ಟಿ. ಕಾಯ್ದೆ :-

ದಿನಾಂಕ 22-12-2022 ರಂದು 1800 ಗಂಟೆಗೆ ಠಾಣೆಗ ಹಾಜರಾಗಿ ಫಿರ್ಯಾದಿ ಶ್ರೀ. ಅತುಲ ತಂದೆ ಅಶೋಕ್ ಡೈಜೊಡೆ ಸಾ: ದೇವಿ ಕಾಲೋನಿ ರವರು ಲಿಖಿತ ದೂರು ನೀಡಿದರ ಸಾರಂಶವೇನೆAದರೆ, ದಿನಾಂಕ 07-11-2022 ರಂದು 2035 ಗಂಟೆಗೆ ಅರ್ಜಿದಾರರನ ಮೋಬೈಲಿಗೆ ಅಪರಚಿತ ವ್ಯಕ್ತಿಯಿಂದ ಒಂದು ಸಂದೇಶ ಬಂದಿದ್ದು, ಅದರಲ್ಲಿ ಜಿ-ಮೇಲ್ ಅಕೌಂಟ್ ಖಾತೆಗೆ 2 ಕೋಟಿ 6 ಲಕ್ಷ ಬಹುಮಾನ ಬಂದಿದೆ ಅಂತ ಸಂದೇಶ ಬಂದಿರುತ್ತದೆ. ಬಹುಮಾನ ಪಡೆಯಬೇಕಾದರೆ ಕೆಲವು ನಿಯಮಗಳು ಇದ್ದು ಅವುಗಳನ್ನು ಪೂರೈಸಿದರೆ ನಿಮಗೆ ಬಹುಮಾನ ಕಳುಹಿಸುತ್ತೇವೆ ಅಂತ ಹೇಳಿರುತ್ತಾರೆ. ಆಗ ನನ್ನಿಂದ ಬಹುಮನಕ್ಕೆ ವಿವಿಧ ವೆಚ್ಚಗಳು ತಗಲುತ್ತವೆ ಅಂತ ಹೇಳಿ ಫಿರ್ಯಾದಿಯು ಅದನ್ನು ನಂಬಿ ಅಂದಿನಿAದ ದಿನಾಂಕ 03-12-2022 ರ ರವರೆಗೆ ಹಂತ ಹಂತವಾಗಿ ವಿವಿಧ ಬ್ಯಾಂಕಗಳಿಗೆ ಒಟ್ಟು 7, 85, 500 ರೂಪಾಯಿಗಳು ಖಾತೆಗೆ ಹಾಕಿಸಿಕೊಂಡು ಮೋಸಮಾಡಿರುತ್ತಾರೆ. ಕಾರಣ ಸದರಿಯವರ ಮೇಲೆ ಕಾನೂನು ಕ್ರಮ ಕೈಗೊಳ್ಳಲು ವಿನಂತಿ. ಅಂತ ಇದ್ದ ದೂರು ಫಿರ್ಯಾದಿ ಮೇರೆಗೆ ಪ್ರಕರಣ ದಾಖಲು ಮಾಡಿಕೊಂಡು ಮುಂದಿನ ತನಿಖೆ ಕೈಗೊಳ್ಳಲಾಗಿದೆ.

### ಬೀದರ ನೂತನ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 226/2022 ಕಲಂ 379 ಐಪಿಸಿ :-

ದಿನಾಂಕ 22/12/2022 ರಂದು 1151 ಗಂಟೆಗೆ ಫಿರ್ಯಾದುದಾರರಾದ ಕೆ.ಗಣೇಶ ತಂದೆ ಭಾಸ್ಕರಾಚಾರ್ಯ ವಯ:34 ವರ್ಷ ಜಾತಿ:ಅಕ್ಕಸಾಲಿಗ ಸಾ/ಪ್ಲಾಟ ನಂ.106/ಪಿ ಕಮಲಾನಗರ ಕಾಲೋನಿ ಚೆಂಗಿಚೆರಲಾ ಮೆಡಿಪಲ್ಲಿ ಮಂಡಲ ಮಲಕಜಗಿರಿ ಮೆಡಚಲ ಜಿಲ್ಲಾ ಹೈದ್ರಾಬಾದ ತೆಲಂಗಾನಾ ಸಧ್ಯ ಬಸವನಗರ ಮೈಲೂರ ಕ್ರಾಸ ಗುಂಪಾ ರೋಡ ಬೀದರ ರವರು ದೂರು ನೀಡಿದರ ಸಾರಾಂಶವೇನೆAದರೆ ದಿನಾಂಕ06/12/2022 ರಂದು ಕರ್ತವ್ಯಕ್ಕಾಗಿ ಬಂದು ಮುಂಜಾನೆ 9:45 ಎ.ಎಮ್. ಗಂಟೆಗೆ ಮೊಟರ ಸೈಕಲನ್ನು ಸಪನಾ ಕಾಂಟಿನೆAಟಲನ ಸೆಲ್ಲಾರದಲ್ಲಿ ನಿಲ್ಲಿಸಿ ಸಪನಾ ಕಾಂಟಿನೆAಟಲ ಕಾಂಪ್ಲೆಕ್ಸನಲ್ಲಿ ಇರುವ ಪಂಜಾಬ ಅಂಡ ಸಿಂದ ಬ್ಯಾಂಕಗೆ ಕರ್ತವ್ಯಕ್ಕಾಗೆ ಹೋಗಿ ಮರಳಿ ಮದ್ಯಾಹ್ನ 3:30 ಪಿ.ಎಮ್. ಗಂಟೆಯ ಸಮಯಕ್ಕೆ ಕಸ್ಟಮರ ವಿಜಿಟಗಾಗಿ ಹೋಗಲು ಮರಳಿ ಬಂದು ನೋಡಿದಾಗ ಮೊಟರ ಸೈಕಲ ಇಟ್ಟಿದ್ದ ಜಾಗದಲ್ಲಿ ಇದ್ದಿರುವದಿಲ್ಲ. ಯಾರೋ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆ. ಕಳ್ಳತನವಾದ ಮೊಟರ ಸೈಕಲ ವಿವರ ಹೀಗಿರುತ್ತದೆ: ಹೊಂಡಾ ಶೈನ ಮೊಟರ ಸೈಕಲ ನಂ. ಟಿ.ಎಸ್.08-ಇಇ-6619 ಚಾ.ನಂ. ಎಮ್.ಇ.4ಜೆಸಿ36ಪಿಜೆಇಟಿ015416 ಇಂಜಿನ ನಂ. ಜೆ.ಸಿ.36ಇ-ಟಿ-7165028 ಮಾಡಲ್:2014, ಅ,ಕಿ 15,000/-ರೂ ಆಗಿರುತ್ತದೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

### ಹಳ್ಳಿಖೇಡ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 129/2022 ಕಲಂ 457, 380 ಐಪಿಸಿ :-

ದಿನಾಂಕ: 22/12/2022 ರಂದು 18:00 ಗಂಟೆಗೆ ಫರ್ಯಾದಿ ವಿದ್ಯಾವತಿ ಗಂಡ ವಿಷ್ಣುವರ್ಧನ ತುಂಕುಟಾ ಸಾ// ಕಪ್ಪರಗಾಂವ್ ರವರು ಠಾಣೆಗೆ ಹಾಜರಾಗಿ ಲಿಖಿತ ದೂರು ನೀಡಿದರ ಸಾರಾಂಶವೇನೆAದರೆ ಸಾರಂಶವೆನೆಂದರೆ, ದಿನಾಂಕ 21/12/2022 ರಂದು ರಾತ್ರಿ 09:30 ಗಂಟೆ ಸುಮಾರಿಗೆ ಊಟ ಮಾಡಿ ನಮ್ಮ ಮನೆಯ ಒಂದು ಕೋಣೆಗೆ ಕೀಲಿ ಹಾಕಿ ಇನ್ನೊಂದು ಕೋಣೆಯಲ್ಲಿ ಮಲಗಿಕೊಂಡಿರುತ್ತಾರೆ ನಂತರ ಮುಂಜಾನೆ 06:00 ಗಂಟೆಗೆ ನಾನು ಎದ್ದು ನಮ್ಮ ಕೋಣೆಯ ಕೊಂಡಿ ತೆರೆದು ಕಸ ಗುಡಿಸುವಾಗ ನಾವು ಮಲಗಿದ ಕೋಣೆ ಬಿಟ್ಟು ಇನ್ನೊಂದು ಕೋಣೆಯ ಬಾಗಿಲನ ಕೀಲಿ ಮುರಿದಿದ್ದು ಇರುವುದನ್ನು ನೋಡಿ ಅಲೇಮಾರಿಯ ತೆರೆದ್ದು ನೋಡಿ ಅದರಲ್ಲಿದ್ದ ಬಟ್ಟೆಗಳು ಚೆಲ್ಲಾ ಪಿಲ್ಲಿ ಆಗಿದ್ದು ಅಲಮಾರಿಯಲ್ಲಿ ಇದ್ದ 1] ನಗದು ಹಣ 3,00,000/- ರೂ, 2] ಒಂದು ತೋಲಿ ಲಕೇಟ ಬಂಗಾರ ಅ,ಕಿ 40,000/- 3] ಒಂದು ತೊಲಿ ಬಂಗಾರದ ಕಿವಿಯ ಹೂವುಗಳು ಮತ್ತು ಜುಮಿಕಿಗಳು ಅಕಿ 40,000/- 4] ಒಂದು 5 ಗ್ರಾಂ ಬಂಗಾರದ ಉಂಗುರು ಅ.ಕಿ 20,000/-ರೂ ನೇದ್ದವು ಇರಲಿಲ್ಲ. ದಿನಾಂಕ 21/12/2022 ರಂದು ರಾತ್ರಿ 10:00 ಗಂಟೆಯಿAದ ದಿನಾಂಕ: 22/12/2022 ರಂದು ಮುಂಜಾನೆ 05:00 ಗಂಟೆಯ ಮಧ್ಯ ಅವಧಿಯಲ್ಲಿ ಯಾರೋ ಅಪರಿಚಿತ ಕಳ್ಳರು ಕೋಣೆಯ ಕೀಲಿ ಮುರಿದು ಒಳಗೆ ಪ್ರವೇಶ ಮಾಡಿ ಅಲಮಾರಿಯಲ್ಲಿ ಇದ್ದ ನಗದು ಹಣ 3,00,000/- ರೂ, 2 ತೋಲಿ 5 ಗ್ರಾಂ ಬಂಗಾರ ಅ.ಕಿ 1,00,000/- ರೂ ನೇದ್ದವು ಕಳವು ಮಾಡಿಕೊಂಡು ಹೋಗಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.